Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ೬೯ —

ಸತ್ಯವಾದಿ
SATYAVADI

ಸ್ಥಾಪಕರು– ಆರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಕಯ್ಯರು [ಬಿಡಿ ಪ್ರತಿ 3 ಪೈ

9—5—1962

ಪ ಮು ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಡಾಕಾಕೆ ಫೀಜೋರವರ ರ ರ ಆಗಮನ

ತಾರೆಯ ಮರಣ

45 ವರ್ಷದ ಸಿನಿಮಾ ತಾರೆ ಟಿ ಎಸ್ ಜ್ಞಾನಂ ನಿನ್ನೆ ತಿರುಚಿಯಿಂದ ಮದ್ರಾಸಿಗೆ ಕಾರಿನಲ್ಲಿ ಬರುತ್ತಿದ್ದಾಗ ಗುಡುರ್ವ ಚೇರಿ ಬಳಿ ಲಾರಿಯೊಂದಕ್ಕೆ ಡಿಕ್ಕಿ ಒಡಿದು ಸತ್ತರು.

ಅಪಹರಣ

ಮೊನ್ನೆ ರಾತ್ರಿ ತನ್ನ ಕಾರಿನಲ್ಲಿ ತನ್ನ ಗ್ರಾಮದಿಂದ ನೆಲ್ಲೂರಿಗೆ ಹೋಗುತ್ತಿದ್ದಾಗ ಜೊನ್ನವಾಡ ಪಂಚಾಯಿತಿಯ ಅಧ್ಯಕ್ಷ ಶ್ರೀ ಟಿ. ಮಹಾರುದ್ರಯ್ಯನವರು ಅಪಹರಣವಾಯಿತು.

ಕಾಶ್ಮೀರ ಚರ್ಚೆ

ಜೂರ್ಕನಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಸಮಾವೇಶವಾಗುವ ಮುನ್ನ ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿದಂತೆ ಮತ್ತೆ ಭದ್ರತಾ ಸಮಿತಿ ಸಮಾವೇಶವಾಗಬಹುದು. ಭದ್ರತಾ ಸಮಿತಿಯ 11 ಸದಸ್ಯರ ಪೈಕಿ 7 ಸದಸ್ಯರು ಮುಂದಿನ ಹದಿನಾಲ್ಕು ದಿವಸಗಳಲ್ಲಿ ಸಭೆ ಕರೆಯುವ ಬಗ್ಗೆ ಭರವಸೆ ಕೊಟ್ಟಿದ್ದಾರೆ. ಅನುಶರ ಬಂಡ ಪಾರ್ಟಿಯೆಂದರೆ ಜನರಲ್ ಅಸೆಂಬ್ಲಿ ಸೇರುವ ಮುನ್ನ ಭದ್ರತಾ ಸಮಿತಿ ಸಮಾವೇಶವಾಗುವದು.

ಹೆಲಿಕಾಪ್ಟರ್ ತಯಾರಿ

ಭಾರತದಲ್ಲಿ ಹೆಲಿಕಾಪ್ಟರುಗಳ ತಯಾರಿಕೆಗೆ ಫ್ರಾನ್ಸಿನ ಸಂಸ್ಥೆಯೊಡನೆ ರಕ್ಷಣಾ ಶಾಖೆ ಒಪ್ಪಂದ ಮಾಡಿಕೊಂಡಿದೆ ಎಂದು ಮುಂದಾಗಿ ನವದೆಹಲಿಯ ವಾರ್ತೆಯಿಂದ ಗೊತ್ತಾಗಿದೆ ಯಂತ್ರಾಗಾರವನ್ನು ಚಂಡೀಘರ್‌ನಲ್ಲಿ ಸ್ಥಾಪಿಸಲು ಪೂರ್ವ ಭಾವಿ ಕ್ರಮಗಳನ್ನು ಕೈಗೊಳ್ಳಲಾಗುವದು.

ಏಲಾಂಗಿಗೆ ಸೋವುವಾರ ಬಂದಿಳಿದ ಅಂದಿಯ ಪ್ರಕಾಂ ನಾಗಾ ದಂಗೆಕೋರ ನಾಯಕ ಫೀಜೋ ಲಂಡನ್ನಿನಿಂದ ಡಾಕ್ಕಾಗೆ ಶನಿವಾರ ತಲುಪಿದರೆಂದು ಗೊತ್ತಾಗಿದೆ ಅವರು ಅಲ್ಲಿಗೆ ಬಂದೊಡನೆ ತಾನೇ ಜನರಲ್ ಎಂದು ಕರೆದುಕೊಂಡ ಅವರ ತಮ್ಮ ಕೈಟೊರೊಂದಿಗೆ ಮಾತು ಕತೆ ಆರಂಭಿಸಿದರು ಮೇ 1 ನೆಯ ತಾ|| ಕೈಟೊ ಪೂರ್ವ ಪಾಕಿಸ್ತಾನಕ್ಕೆ ಹಿಂದಿರುಗುವನು. ಮಾತುಕತೆಗಳಲ್ಲಿ ಡಾಕ್ಕ ಅಧಿಕಾರಿಗಳು ಭಾಗವಹಿಸುತ್ತಿರುವರೆಂಬುದಾಗಿ ಬಲ್ಲವೃತ್ತಗಳಿಂದ ಗೊತ್ತಾಗಿದೆ ನಾಗಾಗಳ ದೇಶಭ್ರಷ್ಟ ಸಂಸ್ಥೆಗಳ ರಚನೆಯನ್ನು ಈರಿತು ಪಾಕಿಸ್ತಾನದ ಉನ್ನತ ಅಧಿಕಾರಿಗಳೊಡನೆ ಕೈಟೊ ಭೇಟಿ ನಡೆಸಿದರೆಂದು ವಂದಿಯಾಗಿರುವದು ಆದರೆ ಇದಕ್ಕೆ ಸಮರ್ಥನೆ ದೊರೆತಿಲ್ಲ

ಬಿಡುಗಡೆ

ಕಳೆದ ವರ್ಷ ಆಗಸ್ಟಿನಲ್ಲಿ ನಾಗಾ ಜನರಿಂದ ಬಂಧಿತರಾಗಿದ್ದ ನಾಲ್ವರು ಭಾರತೀಯ ವೈಮಾನಿಕರನ್ನು ಈ ಮಾಹೆ 5 ರಂದು ಭಾರತ – ಬರ್ಮಾ ಗಡಿಯಲ್ಲಿ ಶಕ್ತ್ರ ನಾಗಾಗಳು ವಹಿಸಿಕೊಟ್ಟರು. 4 ಜನರು ಆರೋಗ್ಯವಾಗಿರುವರು. ಅವ ಹೆಲಿಕಾಪ್ಟರಿನಲ್ಲಿ ರಂಗೂನಿಗೆ ಕರೆದು ಕೊಂಡು ಹೋಗಿ ಭಾರತ ರಾಯಭಾರಿ ಕಚೇರಿಗೆ ಕರೆದುಕೊಂಡು ಹೋಗುವ ವ್ಯವಸ್ಥೆಗಳಾಗುತ್ತಿವೆ.

ಬೆಂಕಿ ಅನಾಹುತ

ಭಾನುವಾರ ರಾತ್ರಿ ಬಾಂಬೆಗೆ 33 ಮೈಲಿಗಳ ದೂರದ ತಾ ಗಾಮದಲ್ಲಿ ಭಾರಿ ಅಗ್ನಿ ಅನಾಹುತದ ಕಾರಣ ಆ ಗಾಮವೇ ನಾಶವಾಯಿತು ನಾಲ್ವರು ಮಹಿಳೆಯರು ಈರ್ವರು ಮಕ್ಕಳು ಜೀವ ಸಹಿತ ಸುಟ್ಟುಹೋದರು.

ಹುಟ್ಟುದ ಮಕ್ಕಳ ಮದುವೆ

ಜೋಧ್ಪುರ ವಿಭಾಗದ ಸಾಂಚೂರ ಪ್ರದೇಶದಿಂದ ಬಂದಿರುವ ವಂದಿಯು ಪ್ರಕಾಶ ಜ್ಯೋತಿಷದ ಆಧಾರದ ಮೇಲೆ, ಇನ್ನೂ ಜನಿಸದ ಮಕ್ಕಳ ಮದುವೆಯನ್ನು ಅವರ ತಂದೆತಾಯಿಗಳು ಮಾಡಿರುವರು ಆಕ್ಷತೀಜಿನ ಪವಿತ್ರ ಸಂದರ್ಭದಲ್ಲಿ ಈ ವಿಭಾಗದಲ್ಲಿ 10 ಸಾವಿರ ಮದುವೆಗಳಾಗಿವೆ ಸೂರಾರು ಶಿಶುವಿವಾಹಗಳೂ ಇದರಲ್ಲಿ ಸೇರಿವೆ ಅನೇಕ ಸಂದರ್ಭಗಳಲ್ಲಿ ವಧೂವರರನ್ನು ತಂದೆತಾಯಿಯಂದಿರು ಪ್ರತಿದಿಗಾಗಿ ಚಪ್ಪರಕ್ಕೆ ಎತ್ತಿಕೊಂಡು ಬಂದೇರಬಾಯಿತು

ಬೀಳ್ಕೊಡುಗೆ

ಭಾರತದ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರು ನಿನ್ನೆ ನವದೆಹಲಿ ಪಾರ್ಲಿಮೆಂಟಿನ ಮಧ್ಯದ ಹಾಲ್‌ನಲ್ಲಿ ಪಾರ್ಲಿಮೆಂಟು ಸದಸ್ಯರು ಇತ್ತ ಬೀಳ್ಕೊಡುಗೆಗೆ ಉತ್ತರವಿಸಿ, ಚುನಾವಣೆ ವೆಚ್ಚ ಇಳಿಸಬೇಕು, ಪ್ರಜಾಪ್ರಭುತ್ವ ರಕ್ಷಿಸಬೇಕು, ರಾಷ್ಟ್ರೀಯ ಸಂಘಟನೆ ಮಾಡಬೇಕು ಎಂದರು.

ಮಕ್ಕಳ ಜಗಳದಿಂದ ರ

ಭದ್ರಾವತಿ 2— ಚಿಕ್ಕ ಹುಡುಗಿಯರ ಬ್ಬರಲ್ಲಿ ಜಗಳವಾಗಿ ಅವರ ಮನೆಯವರಲ್ಲಿ ಬೈಯಾಟ ಪ್ರಾರಂಭವಾಗಿ ಗಂಡಸರಲ್ಲಿ ಹೊಡೆದಾಟವಾಗಿ ಒಬ್ಬನು ಚೂರಿ ಇರಿತದಿಂದ ಮಡಿದು ಮತ್ತೊಬ್ಬನು ತೀವ್ರ ಗಾಯಗೊಂಡನು ; ಈ ಸಂದರ್ಭದಲ್ಲಿ ನಾಲ್ವರು ದಸ್ತಗಿರಿಯಾಗಿದೆ

ಮರು ವಿಮರ್ಶೆ ಆಗಬೇಕು

ವಿಶ್ವಸಂಸ್ಥೆಯು ಕಾಶ್ಮೀರ ಸಮಸ್ಯೆಯನ್ನು ಪುನರ್ವಿಮರ್ಶೆ ಮಾಡುವದರಿಂದ ವಿಶ್ವಸಂಸ್ಥೆಯನ್ನು ಬಲಗೊಳಿಸಲು ಪ್ರಥಮ ಅಪೇಕ್ಷೆ ಆಗುವದೆಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯು ಥಾಂಟ್ ಸ್ಟಾಕ್‌ಹೋಂನಲ್ಲಿ ನಿನ್ನೆ ತಿಳಿಸಿದರು.

ವಿವಿಧ ವಿಷಯಗಳು

ತಿರುಪತಿಗೆ 10 ಮೈಲುಗಳ ದೂರದ ಬುಚಿರೆಡ್ಡಿಪಲ್ಲೆ ಗ್ರಾಮದಲ್ಲಿ ಕಳೆದ ಶುಕ್ರವಾರ ಗಲಭೆ ಆಗಿ ಕಲ್ಲು ಹೊಡೆತಗಳಿಂದ 50 ಮನೆಗಳಿಗೆ ನಷ್ಟವಾಗಿ ರೂ. 2 ಸಾವಿರ ನಷ್ಟವಾಗಿದೆ ವಿಧಾನಸಭೆ ಚುನಾವಣೆಯಲ್ಲಿ ಸೋತವರು ಕಡೆಯವರಿಗೂ, ಗೆದ್ದವರು ಕಡೆಯವರಿಗೂ ಹೊಡೆದಾಟವಾಯಿತು.

ಸರ್ಕಾರದ ವಿರುದ್ಧ ಪ್ರದರ್ಶನಗಳಿಗೆ ಒತ್ತಾಯ ಮಾಡುವ ಹಸ್ತಪ್ರತಿಗಳನ್ನು ಹಂಚಿಕೆ ಮಾಡಿರುವ ಸಂದರ್ಭದಲ್ಲಿ ನಿನ್ನೆ ಲಿಬ್ಬರ್ಟ್ ಹಾಗೂ ಒವಾಲ್ಟೋವಿನಲ್ಲಿ ಕ್ಷಣಾ ಒಲವನ್ನು ಕರೆಸಿದೆ.

ಅಗತ್ಯ ಪದಾರ್ಥಗಳು ಮೊರೆತರೂ ನೇಪಾಳ ಅನ್ನ ಜಾಂಬು ಮಾಡುವದಿಲ್ಲ ಎಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಗೆ ನೇಪಾಳ ತಿಳಿಸಿದೆ

ವದರಾಸು 8— 20 ಕೋಟಿ ರೂಗಳಷ್ಟು 100 ರೂಗಳ ಪೈಸಾ ಬಾಂಡುಗಳೂ, 12-11 ಕೋಟಿ ರೂಗಳಷ್ಟು 5 ರೂಗಳ ಪೈಸಾ ಬಾಂಡುಗಳೂ ಮಾರಾಟವಾಗಿಲ್ಲವೆಂದು ತಿಳಿಯಬಂದಿದೆ

ಹಾಸನ 8— ತಾಲ್ಲೂಕು ಬೋರ್ಡು ಅಧ್ಯಕ್ಷ ಶ್ರೀ ಕರೀಗೌಡರು ತಾ|| 11 ರೊಳಗೆ ರಾಜೀನಾಮೆ ಕೊಡದಿದ್ದರೆ ಅವರ ಮೇಲೆ ಅವಿಶ್ವಾಸ ನಿರ್ಣಯ ತರಲು ನಿರ್ಧರಿಸಲಾಗಿದೆ

ಜುಲೈ 31 ರೊಳಗೆ ಆಸ್ಟ್ರೇಲಿಯಾ ಭಾರತಕ್ಕೆ 2-7 ಲಕ್ಷ ಟನ್ನುಗಳಷ್ಟು ಗೋಧಿಯನ್ನು ಕರಾರಾಗಿ ಮಾಡುವೆದಾಗಿ ಉಪ ಆಹಾರ ಮಂತ್ರಿ ಶ್ರೀ ಥಾಮನ್ ಲೋಕಸಭೆಯಲ್ಲಿ ತಿಳಿಸಿದರು.

ಶಾಂತ ಸಾಗರದಲ್ಲಿ ಅಮೆರಿಕ ಅಣು ಪ್ರಯೋಗ ಆರಂಭಿಸಿರುವದರಿಂದ ರಷ್ಯ ಕೂಡ ಪ್ರಯೋಗ ಆರಂಭಿಸುವದೆಂದು ಟೋಕಿಯೋ ವಾರ್ತೆ.

ನಾಳೆಯ ಪಂಚಾಂಗ

ಶ್ರೀಮನ್ನ ಮಹಾವಿದ್ವಾ ದರ್ಶಾಧಿಕಾರಿ
ದೈವಜ್ಞ ಶಿರೋಮಣಿ
ಪಂಪಶ್ಯಾಸ್ತ್ರಿ ಜೋಯಿಸರಿಂದ

10 ನೆಯ ಪುಟ್ಟ ನೋಡಿ

ಗಗನಯಾನದ ಜೂಜಿನಲ್ಲಿ

ವಾಷಿಂಗ್ಟ್ 8— ಗಗಗಯಾನ ಜೂಜಿನಲ್ಲಿ ರಷ್ಯವೇ ಮೇಲ್ಪಟ್ಟುದಾಗಿರುವುದೆಂದು ಅಭಿಪ್ರಾಯ ಪಡಲಾಗುತ್ತಿದೆ.

ಸಕ್ಕರೆ ತಯಾರಿಕೆ

ಸವದೆಹಲಿ 8— ಕಬ್ಬಿನಿಂದ ಸೇರುವಾಗಿ ಸಕ್ಕರೆ ತಯಾರಿಸುವ ' ವ್ಯಾಕ್ಯೂಂ ಪ್ಯಾನ್ ' ಕಾರ್ಖಾನೆಗಳು 51-62 ರಲ್ಲಿ ಒಟ್ಟು 27-84 ಲಕ್ಷ ಟನ್ನಗಳಷ್ಟು ಸಕ್ಕರೆಯನ್ನು ತಯಾರಿಸಿರುವುದಾಗಿ ತಾತ್ಕಾಲಿಕವಾಗಿ ಅಂದಾಜುಹಾಕಲಾಗಿದೆ.

ಮುಖ್ಯ ಮಂತ್ರಿ ಶ್ರೀ ಕಂಠಿಯವರ ನುಡಿಗಳು

ಕಚ್ಚಾ ಫಲಂ ತಯಾರಿಕೆಗೆ ಬೇಕಾದ ಅಸಿಟೇಟ್ ಕಾರ್ಖಾನೆಯೊಂದನ್ನು ಸಧ್ಯದಲ್ಲೇ ಮುಂಡ್ಯದಲ್ಲಿ ಸ್ಥಾಪಿಸಲಾಗುವುದು

೦೦೩೦

ಶ್ರೀ ಬಸವಣ್ಣಪ್ಪನವರು, ಗಾಂಧೀಜೀ ಮೊದಲಾದ ಮಹನೀಯರು ತೋರಿದ ಮಾರ್ಗದಲ್ಲಿ ಎಲ್ಲರೂ ನಡೆಯಬೇಕು.

★

ಪುರಂದರದಾಸರು ಕಂಡ ಲೋಕದ ರೀತಿನೀತಿಗಳು

— ಎರಡು ದಿನದ ಬಾಳ್ವೆ —

ಚಿಕ್ಕ ಮಕ್ಕಳು ಆಡುವಾಗ ರಟ್ಟಿನಿಂದಲೋ, ಎಲೆಗಳಿಂದಲೋ ಸಣ್ಣ ಸಣ್ಣ ಮನೆಗಳನ್ನು ಕಟ್ಟಿ, ಆಟದಲ್ಲೇ ಮಗ್ನರಾಗಿರುತ್ತಾರೆ : ಆ ಮೇಲೆ ಆಟವು ಸಾಕೆಂದು ತೋರಿದೊಡನೆ ಆ ಮನೆಗಳನ್ನು ಮುರಿದು ಓಡಿಹೋಗುತ್ತಾರೆ ; ಒಂದು ಊರಿನಲ್ಲಿ ಸಂತೆ ಸೇರುತ್ತದೆ : ಅಲ್ಲಿ ನಾನಾ ಪರಿಯ ಜನರು ಬರುತ್ತಾರೆ ; ಆದರೆ ತಮ್ಮ ತಮ್ಮ ಕೆಲಸಗಳು ಮುಗಿದುವೆಂದರೆ, ಅವರು ತಮ್ಮ ತಮ್ಮ ದಾರಿ ಹಿಡಿದು ಹೋಗುತ್ತಾರೆ : ಅದೇ ರೀತಿಯಲ್ಲಿ ಹಕ್ಕಿಗಳು ಕಾಳನ್ನು ಹೆಕ್ಕಲು ಮನೆಯ ಅಂಗಳಕ್ಕೆ ಬರುತ್ತವೆ ; ಕಾಳುಗಳನ್ನು ಹೆಕ್ಕಿಯಾದ ಮೇಲೆ ಎಲ್ಲೋ ಹಾರಿ ಹೋಗುತ್ತವೆ : ವಸತಿಗಾರನು ರಾತ್ರಿ ಮನೆಗೆ ಬಂದು, ಬೆಳಗಾದೊಡನೆ ಹೊರಟು ಹೋಗುತ್ತಾನೆ ; ಮಕ್ಕಳು ಆಟದ ಮನೆಯಲ್ಲಿ, ದಾರಿಹೋಗರು ಸಂತೆಯಲ್ಲಿ, ಹಕ್ಕಿಗಳು ಅಂಗಳದಲ್ಲಿ, ವಸತಿಗಾರನು ಮನೆಯಲ್ಲಿ ತಾತ್ಕಾಲಿಕವಾಗಿ ಆ ಸಕ್ತಿಯನ್ನು ತೋರಿಸುವ ರೀತಿಯಲ್ಲಿ, ನಾವು ಸಂಸಾರದಲ್ಲಿ ಆಸಕ್ತಿ ತೋರಿಸಬೇಕು ; ಮತ್ತು ಸಂಸಾರದಿಂದ ಮುಕ್ತರಾಗಲು ದೇವರನ್ನು ಸ್ಮರಿಸಬೇಕು, ಹಾಗೂ ಸುಖದಾಯಕವಾದ ದೇವರ ನಾಮದ ಭಜನೆ ಮಾಡಬೇಕು : ಇದೇ ದೊಡ್ಡ ಭಾಗ್ಯ.

Help The 'Gorakshana'



" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.

ವುಡ್‌ಲ್ಯಾಂಡ್ಸ್ ಮಹಿಮಾನ್ವಿತ 13-ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನವರಿಯ 3 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]



ಅಮೇರಿಕಾ ಕಾರ್ಮಿಕ ವರ್ಗ ಅಭ್ಯುದಯ ಸಂಬಂಧಿಸಿದ ಚಿತ್ರಗಳು

SHAKTI SUDHA

A Superb Tonic